ಹಲೋ... ಆಗಲೇ ರೆಡಿಯಾಗಿ ಹೊರಟುಬಿಟ್ರೆ. ಕ್ಯೈಟ್ ಸ್ಮಾರ್ಟ್ ಎಂದು ನಕ್ಕ. ಅವಳೆದೆಯಲ್ಲಿ ಸಂತಸದ ಹಕ್ಕಿ ಚಿಲಿಪಿಲಿಗುಟ್ಟಿತು. ತನಗರಿವಿಲ್ಲದಂತೆಯೇ ಕವಿತಾ ಚಿಗುರುದುಟಿಗಳರಳಿಸಿ ನಸುನಕ್ಕಳು.

ಅಂದು ಇಂಟರ್‌ವಲ್‌ನ ಟೀಯನ್ನು ಸಂತೋಷನ ಚೇಂಬರ್‌ನಲ್ಲಿ ಕುಡಿದಳು. ಸಂಜೆ ಮನೆಗೆ ಮರಳುವಾಗ ಕಾರು ಫೋರ್ಟ್‌ರೋಡ್ ದಾಟಿ ಮೈನ್ ಸ್ಟ್ರೀಟಿನೆಡೆ ತಿರುಗಿದಾಗ ಕವಿತಾ ಅವನ ಭುಜ ಅದುಮಿ 'ಇದೇನು ದಾರಿ ಮರೆತ ಹಾಗಿದೆ?' ಎಂದು ಕೇಳಿದಳು ಮೃದುವಾಗಿ. 'ನೋ... ನೋ... ಇವತ್ತು ನನ್ನ ಗುಲ್ಜಾರ್‌ನ 'ಮೌಸಮ್' ಇದೆ ಪ್ರಕಾಶ್‌ನಲ್ಲಿ. ಅದನ್ನು ನಿಮ್ಮೊಂದಿಗೆ ನೋಡೋಣಾಂತ. ದಯವಿಟ್ಟು ನೀವು ಕಂಪೆನಿ ಕೊಡ್ಬೇಕು' ಅವನು ನಿರೀಕ್ಷಿಸಿದಂತೆ ಅವಳಿಂದ ಅಸಮ್ಮತಿಯ ದನಿ ಹೊರಡಲಿಲ್ಲ. ಕಾರಿನ ವೇಗ ತೀವ್ರವಾಯಿತು.

ಚಿತ್ರ ನಡೆದಾಗ ಕೆಲವು ಸನ್ನಿವೇಶಗಳಲ್ಲಿ ಅವಳಿಗೆ ಸ್ಥಿರವಾಗಿ ಕೂಡಲಾಗದೆ ಚಡಪಡಿಸಿದಳು. ಅದನ್ನು ಗಮನಿಸಿದ ಅವನು 'ಯಾಕೆ... ಏನಾಯ್ತು?' ಎಂದು ಅವಳ ತೋಳು ಹಿಡಿದು ಕೇಳಿದ. ಅವಳು ಸಾವರಿಸಿಕೊಂಡು 'ಏನಿಲ್ಲ' ಎಂದು ಚಿತ್ರದಲ್ಲಿ ಆಸಕ್ತಿ ವಹಿಸಿದವಳಂತೆ ನಟಿಸಿದಳು. ಏರ್‌ಕಂಡಿಷನ್ಡ್ ಥಿಯೇಟರಿನ ತಂಪು, ಕತ್ತಲೆ ಕರಗಿದ್ದ ಅಸ್ಪಷ್ಟವಾದ ಇನಿಬೆಳಕು. ಚಿತ್ರ ಮುಗಿಯುವವರೆಗೂ ಅವನ ಕೈ ಅವಳ ತೋಳಿನ ಸುತ್ತ ಇದ್ದರೂ ಅವಳು ಬಿಡಿಸಿಕೊಳ್ಳಲಿಲ್ಲ. ಅವನ ಪ್ರಥಮ ಸ್ಪರ್ಶಕ್ಕೆ ಅವಳಲ್ಲಿಯ ಗುಪ್ತ ಬಯಕೆ ಭುಗಿಲೆದ್ದಿತು. ನರಗಳೆಲ್ಲ ನೀವಿದಂತಾಗಿ ಸೀಟಿಗೊರಗಿ ಸಂತಸದಲೆಯಲ್ಲಿ ತೇಲಿಹೋದಳು. ಕಾರ್ತಿಕ್‌ನ ತೋಳ ಬಿಗಿತದಲ್ಲೂ ಇಲ್ಲದ ಹಿಡಿತ, ಸುಖದ ಜೊಂಪು, ತಾನೆಂದೂ ಅನುಭವಿಸಿದ ಹೊಸ ಮಿಡಿತ.

ಮನೆಗೆ ಬಂದು ಅವಳು ಹಾಸಿಗೆಯ ಮೇಲೆ ಹೊರಳಾಡಿದಳು. ಅದೇಕೋ ಅಳು ರಭಸದಿಂದ ನುಗ್ಗಿ ಬಂದಿತು. ಅಂದಿನಿರುಳು ಅವಳ ಕಣ್ಣೀರಿನಲ್ಲಿ ಹಾಸಿಗೆ ನೆನೆಯಿತು. ಬಿಕ್ಕಳಿಕೆಗಳಿಂದ ರಾತ್ರಿ ಬಳಲಿತು.

ಮದುವೆಯಾಗಿ ಆರು ವರ್ಷ ತುಂಬುತ್ತಿದೆ. ಮದುವೆಯೂ ಎಂಥದು. ಕಾರ್ತಿಕ್ ಅಕ್ಕನ ಗಂಡ. ಕುಟುಂಬ ಯೋಜನೆಯ ಮೇರೆಗೆ ಒಂದು ಹೆಣ್ಣು ಎರಡು ಗಂಡುಮಕ್ಕಳ ತಂದೆ. ಮಕ್ಕಳೆಲ್ಲ ಬೆಂಗಳೂರಿನ ರೆಸಿಡೆನ್ಸಿ ಸ್ಕೂಲ್‌ನಲ್ಲಿ ಓದುತ್ತಿದ್ದರು. ವಿಷಮಶೀತ ಜ್ವರದಿಂದ ನರಳಿದ ಅಕ್ಕ ಆರೇ ದಿನಗಳಲ್ಲಿ ಕೊನೆಯುಸಿರೆಳೆಯುವಾಗ ತಂಗಿಯ ಹಸ್ತವನ್ನು ಹಿಡಿದುಕೊಂಡು ತನ್ನ ಮಕ್ಕಳಿಗೆ ತಾಯಿಯಾಗು ಎಂದು ಯಾಚಿಸಿದಾಗ ಅವಳು ಹಿಂದೆ ಮುಂದೆ ಯೋಚಿಸಿದೆ ತಲೆಯಲ್ಲಾಡಿಸಿದ್ದಳು. ಆಗ ಕಾರ್ತಿಕ್ ಇಂಥ ಕಗ್ಗಲ್ಲು ಎಂದು ಅವಳಿಗೆ ಖಂಡಿತ ತಿಳಿದಿರಲಿಲ್ಲ. ತಿಳಿಯುವುದಾದರೂ ಹೇಗೆ ಸಾಧ್ಯವಿತ್ತು? ಯೋಚನೆಗೆ ಅವಕಾಶವೂ ಇರಲಿಲ್ಲ.

ತಾಯಿ ತಂದೆಯರ ಒಲವೂ ಆ ಕಡೆಗೇ ತಿರುಗಿ ತಾನು ಕಾರ್ತಿಕನ ಕೈಹಿಡಿದಿದ್ದೆ. ಅಕ್ಕನ ಮಕ್ಕಳನ್ನು ತುಂಬ ಪ್ರೀತಿಸುತ್ತಿದ್ದೆ. ಕಾರ್ತಿಕ್ ಮೂರು ಮಕ್ಕಳ ತಂದೆಯಂತೆ ಕಾಣುತ್ತಲೇ ಇರಲಿಲ್ಲ.

ಮದುವೆಯಾದ ಹೊಸತರಲ್ಲಿಯೇ ಸೂಕ್ಷ್ಮ ಸ್ವಭಾವದ ತನಗೆ ಅವನ ಸ್ವಭಾವ ತಿಳಿದು ಹೋಯಿತು. ಅವನ ನಿರಾಸಕ್ತಿ, ವೈರಾಗ್ಯಗಳು ಅನುಭವಕ್ಕೆ ಬಂದಾಗ 'ಏನೋ ಅಕ್ಕನ ಅಗಲುವಿಕೆಯ ದುಃಖವಿರಬಹುದು' ಎನಿಸುತ್ತಿತ್ತು. ವರ್ಷಗಳುರುಳಿದರೂ ಅವನ ನಿರಾಸಕ್ತಿ, ಅರಸಿಕತೆಗಳು ಬೆಳೆಯುತ್ತಲೇ ಹೋದಾಗ ಒಳಗೊಳಗೇ ಸಿಡಿದೇಳುತ್ತಿದ್ದಳು.

ಹಾಗೆ ನೋಡಿದರೆ ಎತ್ತಿ ತೋರಿಸುವಂಥ ಯಾವ ಕೆಟ್ಟ ಚಾಳಿಗಳೂ ಅವನಲ್ಲಿರಲಿಲ್ಲ. ಕೆಲವು ಒಳ್ಳೆಯ ಚಟಗಳೇ ಇದ್ದುವು. ಆದರೂ ಅವನು ತನಗೆ ಹಿಮಗಡ್ಡೆಯಾಗುತ್ತ ನಡೆದ.